ನರಸಿಂಹ ಪೈ, ಹೊನ್ನಾವರ
*ಮುತ್ತಿಗಿಂತ ಹೊತ್ತು ಉತ್ತಮ. ಏಕೆ?*



ಹೊತ್ತೊಯ್ಯುವ ಹೊತ್ತು ಬಂದಾಗ ಮುತ್ತು ಹೊತ್ತು ಪ್ರಯೋಜನವಿಲ್ಲವಾದ್ದರಿಂದ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ವಿಶ್ವಮಾನವರನ್ನು ಒಂದಾಗಿ ನೋಡಲು ಕಲಿಸಿದ ಮಹಾತ್ಮರಿಗೆ ಜಾತಿಯ ಸಂಕೋಲೆ ತೊಡಿಸುವುದು ಸರಿಯೆ?*
ಹ್ಞ! ಶಾಂತಿದೂತನಿಗೆ ಗುಂಡು ಹೊಡೆದ ದೇಶದಲ್ಲಿ ವಿಶ್ವಮಾನವನಿಗೆ ಜಾತಿ ಸಂಕೋಲೆ ತೊಡಿಸುವುದೇನು ಮಹಾ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಪ್ರೇಮೋತ್ಸವಕ್ಕೂ, ವಿಜಯೋತ್ಸವಕ್ಕೂ ಇರುವ ವ್ಯತ್ಯಾಸವೇನು ಶಿವಾ?*
ಪ್ರೇಮೋತ್ಸವದ ಸಮಾರೋಪದಲ್ಲಿ ಮಗು; ವಿಜಯೋತ್ಸವದ ಸಮಾರೋಪದಲ್ಲಿ ಮಗ್ಗು (mug).

ಕೆ.ಪಿ. ಸುಜ್ಞಾನಾಚಾರಿ, ಕಲಿಕೆರೆ
*ಕುಬೇರ ಸಹಸ್ರ ಕೋಟ್ಯಧೀಶ, ಬಾಲಾಜಿ ಕೋಟ್ಯಧೀಶ. ಆದರೆ ಆಂಜನೇಯನೇಕೆ ಬಯಲಿನಲ್ಲಿ?*



ಗಣೇಶ್

ಆಂಜನೇಯ ಔದಾರ್ಯಕ್ಕೆ ಹೆಸರಾದ ಕನ್ನಡಿಗರವನು. ಔದಾರ್ಯ ಅತಿಯಾದರೆ ಬಯಲೇ ಗಟ್ಟಿ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಯೋಚನೆಗೆ ಕೊನೆ ಯಾವಾಗ?*
ಸಂಪೂರ್ಣ ಶರಣಾದಾಗ; ಆಗ ಕೇವಲ ಆದೇಶ ಪಾಲನೆಯಷ್ಟೇ ಜೀವನ.

ಬಾಲಕ, ಬೀದರ್
*ಅನೇಕ ವಾಹಿನಿಗಳಲ್ಲಿ ಕನ್ನಡದ ಕೊಲೆ ನಡೆದಿದೆಯಲ್ಲ ಸಾರ್...?*
ನಾಲಿಗೆ ಲಾಯಕ್ಕಾದ ಮತಿ ಮತ್ತು ನಾಲಿಗೆ ಇರುವವರನ್ನು ಆರಿಸಿರುವುದೇ ಕಾರಣವಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಅರಸನಿಗೂ, ಆಳಿಗೂ ಏನು ವ್ಯತ್ಯಾಸ?*
ಆಳಬಲ್ಲವನು ಅರಸ; ಅರಸನ ಆಳ ಬಲ್ಲವನು ಆಳು.

ವಿ. ಹಮೀದ್, ವಿಟ್ಲ
*ಹಿಂದಿನ ಕಾಲದಲ್ಲಿ ರಾಜನಿಗೆ ರಾಜಾಧಿರಾಜ ಎನ್ನುತ್ತಿದ್ದರು. ಇಂದಿನ ರಾಜಕಾರಣಿಗಳಿಗೆ?*
ಕೆಲವರಿಗಂತೂ ಜಾರಾಧಿಜಾರ ಎನ್ನಬಹುದು.

ಮೋಹನರಾಜು ಎಸ್.ಎ. ಶಿವಮೊಗ್ಗ
*ಪ್ರಥಮ ರಾತ್ರಿ ಹೆಂಡತಿ ತನ್ನ ಗಂಡನಿಗೆ ಕುಡಿಯಲು ಹಾಲು ಕೊಡಲು ಕಾರಣವೇನು?*
ಇಂದಿನವರೆಗೆ ಹಾಲಿನಂತಹ ಜೀವನ ಹೊಂದಿದ್ದೇನೆ; ಅದಕ್ಕೆ (ಕಣ್) ನೀರು ಬೆರೆಸಬೇಡಿ ಎಂದು ಸೂಚಿಸಲು.

ಪ್ರಶಾಂತ್ ಮಯ್ಯ, ಸಾಗರ
*ನನ್ನೊಳಗಿನ ಮೌನ ಮಾತು ಬಿಟ್ಟಿದೆ. ಏನು ಮಾಡಲಿ ರಾಂ?*
ಸುಮ್ಮನಿದ್ದುಬಿಡಿ. ಆಲೋಚನೆಗಳು ರೂಪ ತಾಳಿದಮೇಲೆ ಮೌನವೇ ಅವನ್ನು ನುಡಿಯಾಗಿ ಪ್ರಸವಿಸುತ್ತದೆ.

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ಕಳ್ಳಕಾಕರು ಬರೀ ಸರ ದೋಚುವ ಬದಲು ಬಳೆ ಮತ್ತು ಕಾಲುಂಗುರಗಳನ್ನು ದೋಚಿದ್ದೇ ಆದರೆ..?*
ಛೆ! ಕಳ್ಳರಲ್ಲೂ ವೃತ್ತಿಗೌರವ ಇರುತ್ತದೆ; ಅವುಗಳನ್ನು ಕದಿಯಲು ಮನೆಗಳ್ಳರಿಗೇ ಬಿಡುತ್ತಾರೆ.

ಆರತಿ ಘಟಿಕಾರ್, ದುಬೈ
*ಪೊಲೀಸ್ ಠಾಣೆಗೆ ಮಾವನ ಮನೆ ಎನ್ನುವುದೇಕೆ?*
ಒಳಕರೆದು, ಕೂಡಿಸಿ, ತುಂಬು ಮನಸ್ಸಿನಿಂದ ಬಿಸಿಬಿಸಿ ಕಜ್ಜಾಯ ಕೊಡುವುದರಿಂದ.

ಅಮರಯ್ಯಾ ಪತ್ರಿಮಠ, ಸುರಪೂರ
*ಪ್ರಕೃತಿಯಿಂದ ಮಾನವ ಕಲಿಯಬೇಕಾದ ಪಾಠ...?*
ಮರಳುಗಾಡಿನ ಪಾಪಾಸುಕಳ್ಳಿಯಲ್ಲೂ ಜೀವಜಲ ಇರುತ್ತದೆಂಬ ಸಕಾರಾತ್ಮಕತೆ.

## ಬಹುಮಾನಿತ ಪ್ರಶ್ನೆ

ಪಿ. ಚಿದಾನಂದ, ಜವನಗೊಂಡನಹಳ್ಳಿ
*ಪ್ರೇಮ ವೈಫಲ್ಯದಿಂದ ಹುಡುಗಿಯರಿಗಿಂತ ಹುಡುಗರೇ ಹೆಚ್ಚು ಹುಚ್ಚರಾಗುತ್ತಾರಲ್ಲ...?*
ಅವರಿಗೆ ಹುಡುಗಿಯರಿಗಿಂತ ನಿಶೆಯಲ್ಲಿ, ನಶೆಯಲ್ಲಿ ಮುಳುಗಲು ಅವಕಾಶ ಇರುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ
*ಕೊಳಕು ಕಾಲುವೆಯಿಂದ ಹೆಕ್ಕಿದ ಸ್ವರ್ಣಕಣಗಳು ವಿಗ್ರಹದ ಕಿರೀಟಕ್ಕೆ ಹೋಗುವುದು ಸರಿಯೆ?*
ಕೆಸರಿನ ಕಮಲ ಮುಡಿಯೇರುವುದಲ್ಲ! ಪೂಜಾಗೃಹದಲ್ಲಿ ಅಂತಃಸತ್ವವೇ ಅರ್ಹತೆಗೆ ಆಧಾರ.

ಬಾ.ರಂ. ಸುರೇಶ್, ಶಿವಮೊಗ್ಗ
*ಸೆಲ್ಫಿ ಹುಚ್ಚಿಗೆ ಯುವಪೀಳಿಗೆ ಪ್ರಾಣ ಕಳೆದುಕೊಳ್ಳುತ್ತಿರುವರಲ್ಲ, ಇದರ ಮುಂದಿನ ಪರಿಣಾಮವೇನು?*
ಹುಚ್ಚಿಗೆ ಬಲಿಯಾದವರ ತಿಥಿಗೆ ಬಂದ ಸ್ನೇಹಿತರು 'ಸೆಲ್ಫಿ ವಿತ್ ಪಿಂಡ'ವನ್ನು ಅಪ್‌ಲೋಡ್ ಮಾಡುವರಂತೆ.

ವೀಣಾ ರವಿ ಪೈ, ಕಾಸರಕೋಡ
*ಇಂದಿನ ಶಿಕ್ಷಣ ಜನಪರವೋ, ಹಣ ಪರವೋ?*



ಹಣಪರವೇ; ಇಂದಿನ ಬಹುತೇಕ ಶಾಲೆಗಳು ವಿದ್ಯಾವರ್ಧಕ ಸಂಘಗಳಲ್ಲ, ವಿದ್ಯಾ ವರ್ತಕ ಸಂಘಗಳು.

ಮಹಾವೀರ ಕಾಸರ, ಶಿವಮೊಗ್ಗ
*ಉದ್ಧಾರವಾದರೆ ಹೊಟ್ಟೆಯುರಿ; ಉದ್ಧಾರವಾಗದಿದ್ದರೆ ಲೇವಡಿ. ಹಾಗಾದರೆ ಹೇಗಿರಬೇಕು?*
ಮತ್ಸರದ ಶುದ್ಧಶುಂಠಿಗಳಿಗೆ ಶುಂಠಿ ಮಿಶ್ರಿತ ಎಳನೀರು ಕುಡಿಸಿ; ನಿಮ್ಮ ಪಾಡಿಗೆ ಉದ್ಧಾರವಾಗಿ.

■ ರಾಮ್